Reg No. B G 155 18-7-1969

52 nd Year of Publication

SATYAVADI Daily, MYSORE 4



ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಪ್ರತಿಯಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಖರ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸೆ

ಟಂಕು ರಾಜೀನಾಮೆಗಾಗಿ ವಿದ್ಯಾರ್ಥಿಗಳ ಒತ್ತಾಯ

ಪುರಿ ರಥೋತ್ಸವ

ಪುರಿ— ನಿನ್ನೆ ರಥೋತ್ಸವವು ವೈಭವವಾಗಿ ನಡೆಯಿತು – 7 ಲಕ್ಷ ಯಾತ್ರಿಕರು ನೂಕುನುಗ್ಗಲಲ್ಲಿ 15 ಮಂದಿ ಗಾಯಗೊಂಡರು – ಜಗನ್ನಾಥ ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಸಮನೆಂದು ಪ್ರದರ್ಶಿಸಲು ಪುರಿ ರಾಜರು ರಥದ ತಳವನ್ನು ಗುಡಿಸುತ್ತಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಏಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಗೇರುಸಪೆಂದೆ ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ. ಮೈಸೂರು 4.

ಪ್ರಧಾನಿ ಇಂದಿರಾರ ನಾಯಕತ್ವ ಹೋಗಲಿ

ನವದೆಹಲಿ— ಕಾಂಗ್ರೆಸ್ ಪಾರ್ಟಿಯು ಧೈರ್ಯದಿಂದ ವರ್ತಿಸಿ, ದೇಶದ ಹಿತಕ್ಕಾಗಿ ಪ್ರಧಾನಿ ಇಂದಿರಾ ಗಾಂಧಿಯರನ್ನು ನಾಯಕತ್ವದಿಂದ ತೆಗೆಯಬೇಕೆಂದು ಪಿಎಸ್ಪಿ ನಾಯಕ ಶ್ರೀ ಹೆಚ್ ವಿ ಕಾಮತ್‌ರವರು ಹೇಳಿದರು.

★

ಗಾಂಧೀ ಪ್ರದರ್ಶನ

ನವದೆಹಲಿ— ಆಲೆಗ್ಜಾಂಡ್ರಿಯಾದಲ್ಲಿರುವ ಯುವ ಮುಸ್ಲಿಂ ಸಂಘದಲ್ಲಿ ಏರ್ಪಡಿಸಿರುವ 15 ದಿನಗಳ ಗಾಂಧಿ ಪ್ರದರ್ಶನಕ್ಕೆ ಎಲ್ಲಾ ವರ್ಗದ ಜನರು ಅತ್ಯಾಸಕ್ತಿಯಿಂದ ಬರುತ್ತಿದ್ದಾರೆ.

★

ಭಾಷಾ ಕೇಂದ್ರ ಸಂಸ್ಥೆ

ಮೈಸೂರು— ಈ ಸಂಬಂಧದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಮಂತ್ರಿ ಶ್ರೀ ವಿರೇಂದ್ರ ಪಾಟೀಲರವರು– ರಾಷ್ಟ್ರದ ಒಗ್ಗಟ್ಟಿಗೆ ಭಾಷೆಗಳ ಒಗ್ಗಟ್ಟಾಗಬೇಕೆಂದೂ, ಈಗ ನಡೆಯುತ್ತಿರುವ ಭಾಷಾ ವ್ಯಾಜ್ಯ ನಿಲ್ಲಬೇಕೆಂದೂ ಹೇಳಿದರು.

●

ಕಳ್ಳ ಪೋಸ್ಟ್‌ಮನ್

ಮೈಸೂರು— ಲಕ್ಷ್ಮೀಪುರಂ ಪೋಸ್ಟ್ ಫೀಸಿನ ಪೋಸ್ಟ್‌ಮನ್ ಬಸವಲಿಂಗಯ್ಯನೆಂಬಾತನು ರೂ. 3815 ಮನಿಯಾರ್ಡರು ಹಣವನ್ನೊಡಸಿ ತಬೆತಪ್ಪಿಸಿಕೊಂಡಿರುವನೆಂದು ಪೋಲೀಸಿಗೆ ದೂರುಕೊಡಲಾಗಿದೆಯೆಂದೂ ವರದಿಯಾಗಿದೆ.

★

ಲೂನಾ 15

ಜೋಡ್ರೆಲ್ ಬ್ಯಾಂಕ್ (ಇಂಗ್ಲೆಂಡ್)- ರಷ್ಯಾದ ಚಾಲಕನಿಲ್ಲದ ಲೂನಾ 15 ಇಂಬಿಳಿಗೆ ಚಂದ್ರನಲ್ಲಿಳಿಯಬಹುದೆಂದು ಇಲ್ಲಿಯ ಖಗೋಳಶಾಸ್ತ್ರಜ್ಞರ ಜೋಳಿಕೆ.

ಟಂಕು ರಾಜೀನಾಮೆಗೆ

ಕೌಲಂಲುಂಪುರ್—ಪ್ರಧಾನಿ ಟುಂಕು ಅಬ್ದುಲ್ ರೆಹಿರ್ಮಾ ರಾಜೀನಾಮೆ ಕೊಟ್ಟಬೇಕೆಂದು ಮಲಯಾ ವಿಶ್ವವಿದ್ಯಾನಿಲಯದ ಭಾಗದಲ್ಲಿ ತುರ್ತು ಪರಿಸ್ಥಿತಿಯನ್ನು ನಿರ್ಲಕ್ಷಿಸಿ 1000 ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು.

ಅಪೊಲೊ 11

ಹೌಸ್ಟ್ (ಟೆಕ್ಸಾಸ್)— ಚಂದ್ರನಲ್ಲಿಗೆ ಹೊರಟಿರುವ ಅಪೊಲೋ 11 ಸರಿಯಾಗಿ ಹೋಗುತ್ತಿದೆಯೆಂದು ತಿಳಿಸಲಾಗಿದೆ.

ಹೆಂಡತಿಗೆ ಗಂಡನ ಸಲಾಂ!

ಕಲ್ಕತ್ತಾ—ಪಶ್ಚಿಮ ಬಂಗಾಳಾ ಗೃಹ ಶಾಖಾ ನೋಡಿಕೊಳ್ಳುತ್ತಿರುವ ಉಪ ಮುಖ್ಯ ಮಂತ್ರಿ ಜ್ಯೋತಿ ಬಾಸು ಒಬ್ಬ ಮಹಿರಾ ಪೋಲೀಸು ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರು ನೇಮಕದ ಆಜ್ಞೆ ಮಾಡಿದ್ದಾರೆ – ಈಕೆಯ ಗಂಡ ಪೋಲೀಸು ಪ್ಯಾದೆ ಆಗಿರುವದರಿಂದ ಆ ಹೆಂಗಸಿನ ನೇಮಕವನ್ನು ಪೋಲೀಸು ಅಧಿಕಾರಿಗಳು ತಡೆದಿದ್ದರು – ಈಗ ಗಂಡ ಮತ್ತು ಹೆಂಡತಿ ಡ್ಯೂಟಿ ಮೇಲಿರುವಾಗ ಗಂಡ ಹೆಂಡತಿಗೆ ಸಲಾಂ ಮಾಡಬೇಕೇನೋ ಎಂದು ಪೋಲೀಸು ವರ್ತುಳದಲ್ಲಿ ಆಶ್ಚರ್ಯ ಉಂಟಾಗಿದೆ.

ಕೋರ್ಟಿನ ಮೇಲೆ ಧಾಳಿ

ಜಾಂಬಿಯಾದ ಗಲಭೆಗಾರ ಯುವಕರು ಅಲ್ಲಿನ ಹೈಕೋರ್ಟು ಕಟ್ಟಡದ ಮೇಲೆ ಧಾಳಿ ನಡೆಸಿ ಕಿಟಕಿ ಬಾಗಲು ಮುಂತಾದ್ದನ್ನು ಒಡೆದು ಹಾಕಿದರು – ಇಬ್ಬರು ಜಡ್ಜರು ಕೂಡಲೆ ಒಳಗೆ ಕರೆತುಕೊಂಡರು – ಕೋರ್ಟು ಹೊರಗೆ ಕಾರಿನಲ್ಲಿದ್ದ ಜಕೊಸ್ಲೊವಿಯಾ ಪ್ರೆಸ್ ಕಾರ್ಯದರ್ಶಿಯನ್ನು ಗಾಸುಗೊಂಡು ರಕ್ತ ಸುರಿಯುವಂತೆ ಹೊಡೆದರು.

ಡೆಲ್ಲಿ ಬಿಕ್ಕಟ್ಟು

ನವದೆಹಲಿ— ಮಂತ್ರಿಮಂಡಲ ಬಿಕ್ಕಟ್ಟು ಏನೂ ಸಡಲಿಸಿಲ್ಲ — ಪ್ರಧಾನಿಯವರೊಡನೆ ಶ್ರೀ ಚವಣರು ಮಾಡಿದ ಸಲಹೆ ಅವರು ಶ್ರೀ ದೈಸ್ಯಾರೊಡನೆ ಮಾತುಕತೆ ನಡೆಸಿ ಹಿಂದಿದ್ದಂತೆ ಮಾಡಬೇಕೆಂದುದು ಫಲಿಸಲಿಲ್ಲ – ದೇಸಾಯರು ತಮ್ಮ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿರುವರು – ಪ್ರಧಾನರ ಮೇಲೆ ಅವಿಶ್ವಾಸ ಸೂಚನೆ ತರಬಾರದೆಂದು ದೇಸಾಯರ ಬೆಂಬಲಿಗರಿಗೆ ಕಾಂಗ್ರೆಸ್ ಅಧ್ಯಕ್ಷರು ಎಚ್ಚರಿಸಿದ್ದಾರೆ — ಕಾಂಗ್ರೆಸ್ ಪಾರ್ಲಿಮೆಂಟರಿ ರಚನಾಂಗದಲ್ಲಿ ಅವಿಶ್ವಾಸ ಸೂಚನೆ ಮಂಜೂರಾತಿಗೆ ಸದಸ್ಯರ 3 ನೆ 2 ಭಾಗ ವೋಟರಬೇಕೆಂಬ ನಿಬಂಧನೆಯನ್ನು ಪ್ರಧಾನಿಯವರ ಬೆಂಬಲಿಗರು ಹುಡಕಿದ್ದಾರೆ, ಮತ್ತು ತನ್ಮೂಲಕ ಸೂಚನೆಯನ್ನು ಸೋಲಿಸಲು ಸಿದ್ಧರಿದ್ದಾರೆ.

ಮುನಿಸಿಪಾಲಿಟಿಗೆ ಸರ್ಕಾರದ ಬಾಕಿ

ಬೊಂಬಾಯಿ— ಸಿಯಾ—ಮಾತುಂಗಾದಲ್ಲಿನ ನಿವೇಶನದ ಬಾಡಿಗೆ ಬಾಕಿಗಾಗಿ ಮುನಿಸಿಪಲ್ ಕಾರ್ಪೊರೇಷನ್ನು ಕೇಂದ್ರ ಸರಕಾರದ (ರಕ್ಷಣಾ ಇಲಾಖೆ) ಮೇಲೆ ದಾವಾಹಾಕಲು ಯೋಜಿಸಿದೆ – 1954 ರಿಂದ ಬರಬೇಕಾದ ರೂ. 1.25 ಲಕ್ಷದಲ್ಲಿ ಕೇವಲ ರೂ 3000 ವಸೂಲಾಗಿದೆ.

ರೈಲಿನವರ ಸ್ತುತ್ಯ ಕಾರ್ಯ

ಕಟಕ್— ಜಾಜ್‌ಪುರದ ವಿಎಸ್ ಕಾಲೇಜು ಮತ್ತು ಎಸ್ ಬಿ ಹೈಸ್ಕೂಲ ವಿದ್ಯಾರ್ಥಿಗಳು ಖರ್ಸೊ–ಪೂರಿ ರೈಲ್ವೇ ಅನಾಪತಕ್ಕೆ ಕಾರಣವಾದ ಪ್ರಯಾಣೀಕರಿಗೆ ಮಾಡಿದ ಸಹಾಯಕ್ಕಾಗಿ ಆ ಎರಡು ಸಂಸ್ಥೆಗಳಿಗೆ 1000 ಮತ್ತು 500 ರೂ ನೀಡಿರುವರು.

ಚಂದ್ರನಲ್ಲಿಳಿಯಲು

ವಿಶ್ವಸಂಸ್ಥೆ— ಅಪೊಲೋ 11 ಗಗನಯಾನಿಗಳು ವಿಶ್ವಸಂಸ್ಥೆಯ ವಿಶೇಷವಾದ ಮುದ್ರಿತವಾದ ಕಾರ್ಡನ್ನು ತೆಗೆದುಕೊಂಡು ಹೋಗಿದ್ದಾರೆ.

ಆಚಾರ್ಯರ ಹೃದಯವಂತಿಕೆ

[' ಲೇಖನ ಕಾವೇರಿ " ಯಿಂದ]

ತಮಿಳುನಾಡಿದಲ್ಲಿ ಆಳವಂದಾರ್ ಎಂಬ ಪ್ರಖ್ಯಾತರಾಗಿದ್ದ ಯಮುನಾಚಾರ್ಯರು ಮಹಾವೈಷ್ಣವಾಚಾರ್ಯರು. ಅವರು ರಾಮಾನುಜಾಚಾರ್ಯರ ಗುರುಗಳಲ್ಲೊಬ್ಬರು. ಯೋಗಮಾರ್ಗವನ್ನು ಅನುಷ್ಠಾನಕ್ಕೆ ತಂದಿದ್ದ ವೈಷ್ಣವಾಚಾರ್ಯರುಗಳಲ್ಲಿ ಆಳವಂದಾರರೇ ಕೊನೆಯವರು ಮಹಾಸಾಧನೆಯೆನೆತ್ತ ವ್ಯಕ್ತಿಯಾಗಿದ್ದ ಅವರು ವೇದಾಂತ ವಿಷಯಿಕ ಉಪನ್ಯಾಸಗಳನ್ನು ಕೊಡುತ್ತಿದ್ದರು. ಮುಕ್ತಿಮಾರ್ಗ ತೋರಿಸುವುದರಲ್ಲಿ ದಕ್ಷರಾದ ಆಚಾರ್ಯರೆಂದು ಅವರ ಕೀರ್ತಿ ಎಲ್ಲೆಡೆ ಹರಡಿತ್ತು.

ಆ ಕಾಲದಲ್ಲಿ ಮಾರನೇರ್ ನಂಬಿ ಎಂಬ ಧಾರ್ಮಿಕ ಮನೋವೃತ್ತಿಯ ಶ್ರದ್ಧಾವಂತ ವೃದ್ಧನೊಬ್ಬನಿದ್ದ. ಪಂಚಮ ಕುಲದಲ್ಲಿ ಜನಿಸಿದ್ದ ಅವನು ದೇವಾಲಯಗಳನ್ನು ಪ್ರವೇಶಿಸುವಂತಿರಲಿಲ್ಲ. ಅಷ್ಟೇಕೆ, ಧರ್ಮಸಂಬಂಧವಾದ ಉಪನ್ಯಾಸಗಳು ನಡೆಯುತ್ತಿದ್ದ ಸಭೆಗಳಿಗೂ ಅವನ ಪ್ರವೇಶ ನಿಷಿದ್ಧ. ಮುಕ್ತಿಮಾರ್ಗಾನುಯಾಯಿಯಾಗುವ ಅಪಾರ ಕಾತರವಿದ್ದ ಅವನಿಗೆ, ಕಡೆಯಪಕ್ಷ ಆಳವಂದಾರರ ಉಪನ್ಯಾಸವನ್ನಾದರೂ ಕೇಳುವುದು ಸಾಧ್ಯವಾದರೆ ಸಾಕೆನ್ನುತ್ತಿತ್ತು. ಅವನು ಅವರ ಉಪನ್ಯಾಸಗಳನ್ನು ಕೇಳಲು ಹೋಗತೊಡಗಿದ. ದೂರದಲ್ಲಿ ಕುಳಿತು ಕೇಳುತ್ತಾ ಆಳವಂದಾರರೆ ಮಹತ್ ವ್ಯಕ್ತಿತ್ವದೆಸುರು ಆತ ಮೈಮರೆತು ಹೋಗುತ್ತಿದ್ದ. ಹೀಗೆ ಪ್ರತಿನಿತ್ಯ ಬಂದು ಅತ್ಯಂತ ಸರಳತೆಯಿಂದ ದೀನನಾಗಿ ದೂರದಲ್ಲಿ ಕುಳಿತು ತಮ್ಮ ಉಪನ್ಯಾಸಕೇಳುವ ಈತನ ಮೇಲೆ ಆಳವಂದಾರರ ಗಮನ ಬಿತ್ತು.

ತಮ್ಮ ಶಿಷ್ಯ ಪೆರಿಯನಂಬಿಯನ್ನು (ಮುಂದೆ ರಾಮಾನುಜಾಚಾರ್ಯರ ಗುರುವಾದ ಮಹಾನುಭಾವನೀತ) ಕುರಿತು ಈ ವಿಚಿತ್ರ ಭಾಗವತನ ಬಗ್ಗೆ ವಿಚಾರಿಸಲು ತಿಳಿಸಿದರು.

———

ಗಾಂಧೀಜೀ ಅಮೃತವಾಣಿ— ಯಾರಿಗೂ ಅನ್ನಬಟ್ಟೆಯ ತಾಪತ್ರಯವಿಲ್ಲದಂತಹ ಅರ್ಥವ್ಯವಸ್ಥೆ ಭಾರತಕ್ಕೆ, ಅದೇಕೆ, ಸಮಸ್ತ ಪ್ರಪಂಚಕ್ಕೆ ಇರಬೇಕು.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ಜಯಪ್ರದ 3ನೇ ವಾರ

ವುಡ್‌ಲ್ಯಾಂಡ್ಸ್

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯನೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿರಾತ್

ಸಂಗೀತ — ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ— ಅನೋಖ 2ನೇ ವಾರ

ಅನೋಖ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebra very soon

The President, the Prime Minister, H H. the Maharaja Mysore, and other personages have extended messages of le tations and good wishes. Sri Sringeri and Sri Dwar Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basavi Sri Madhav Shenoi. Sri Opera Talkies. Padmabhushana M.C. Modi, Dr. R. S. Nanjunda Swamy (Glasgow) Ananthanarasimha Iyengar (Honganur) have generously exte ed donations and best wishes.

It iswelknown that golden jubilee of newspapers in I is rare and almost unknown in Mysore State. The H Minister has expressed that it is no small achievement.

Hearty cooperation, extending of messages and donat and gracing the occasion with presence, are fervently solic with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nira M S Krishna Rao (Proprietor) at the Satyavadi Pre Chamarajapuram, Mysore 4